MVC No. 84/2019 PW-2

<u>ದಿನಾಂಕ **04.04.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಪರ ಶ್ರೀ ಕೆ ಟಿ ಟಿ ವಕೀಲರಿಂದ ಃ</u>

ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ. ನಾನು ಮೈಸೂರು ಬೆಂಗಳೂರು ರಸ್ತೆಯಲ್ಲಿ ಓಡಾಡುತ್ತಾ ಇರುತ್ತೇನೆ. ಘಟನಾ ದಿನ 8 ಪಥದ ರಸ್ತೆ ಮುಕ್ತವಾಗಿತ್ತು ಎಂದರೆ ನಿಜ. ಪುಟ್ಟಪ್ಪನ ದೊಡ್ಡಿ ಹತ್ತಿರ ಶಾಲಾ ಕಾಲೇಜು, ಆಸ್ಪತ್ರೆ ಇರಲಿಲ್ಲ ಎಂದರೆ ನಿಜ. ಅಲ್ಲಿ ವೇಗ ಮಿತಿ ಹಾಕಿಲ್ಲ ಎಂದರೆ ನಿಜ. ಚನ್ನಪಟ್ಟಣ ಕಡೆಯಿಂದ ಮೃತ ಜಗದೀಶ್ ನನ್ನ ಅಳಿಯ ಬರುತ್ತಿದ್ದರು. ನಾನು ಅವರ ಹಿಂದೆ ಹೋಗುತ್ತಿದ್ದೆ. ರಸ್ತೆಯ ಎಡ ಭಾಗದಲ್ಲಿ ನಾನು ಚಾಲನೆ ಮಾಡುತ್ತಿದ್ದೆ. ಜಗದೀಶ್ ರವರು ರಸ್ತೆಯ ಎಡ ಭಾಗದಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಪುಟ್ಟಪ್ಪನ ದೊಡ್ಡಿ ಹತ್ತಿರ ಜಗದೀಶ್ ರವರು ಯೂ ತಿರುವಿನಲ್ಲಿ ಎಡಗಡೆಯಿಂದ ಬಲಭಾಗಕ್ಕೆ ತೆಗೆದುಕೊಂಡರು ಎಂದರೆ ನಿಜ. ಈ ಸಮಯದಲ್ಲಿ ಜಗದೀಶ್ ರವರು ಯಾವುದೇ ಇಂಡಿಕೇಟರ್ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಕೈ ಸನ್ನೆ ಮಾಡಿದ್ದರು ಎಂದು ನುಡಿಯುತ್ತಾರೆ. ಜಗದೀಶ್ ರವರು ವಾಹನ ನಿಲ್ಲಿಸಿ, ನೋಡಿ ಯೂ ತಿರುವು ಪಡೆದಿದ್ದರೆ ಅಪಘಾತವಾಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಅದೆಲ್ಲವನ್ನಾ ಮಾಡಿರುತ್ತಾರೆಂದು ನುಡಿಯುತ್ತಾರೆ. ಜಗದೀಶ್ ರವರು ಯಾವುದೇ ಇಂಡಿಕೇಟರ್ ಕೊಡದೇ ಏಕಾ ಏಕಿ ತಿರುವು ಪಡೆದಿದ್ದರಿಂದ ಅಪಘಾತವಾಗಿದೆ ಎಂದರೆ ಸುಳ್ಳು. ಬಸ್ಸು ವೇಗ ಮಿತಿಗಿಂತ ಕಡಿಮೆ ವೇಗದಲ್ಲಿ ಚಾಲನೆ ಮಾಡುತ್ತಿದ್ದರು ಎಂದರೆ ಸುಳ್ಳು. ಜಗದೀಶ್ ರವರು ತಪ್ಪು ಮಾಡಿದ್ದರೂ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಜಗದೀಶ್ ರವರನ್ನು ತಪ್ಪಿಸುವ ಸಲುವಾಗಿ ಬಸ್ಸು ಬೇರೆ ದಾರಿಗೆ ಹೋಗಿ ಬಿತ್ತು ಎಂದರೆ ಸುಳ್ಳು.

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.